# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಮನಗರ

ಸಿ.ಸಿ. ನಂ.10/2009

ಚಾಸಾ-1/ಪ್ರಾಸಾ-2

| | | |
|---|---|---|
| ಹೆಸರು | ಃ- | ವಾಜಿದ್ ಪಾಷಾ |
| ತಂದೆ ಹೆಸರು | ಃ- | ಲೇಟ್ ಮಹಮ್ಮದ್ ಅಮೀರ್ |
| ವಯಸ್ಸು | ಃ- | 50 ವರ್ಷ |
| ವೃತ್ತಿ | ಃ- | ಚಾಲಕ |
| ವಾಸ ಸ್ಥಳ | ಃ- | ಕೊಳ್ಳೇಗಾಲ |
| ದಿನಾಂಕ | ಃ- | 01.09.2022 |

ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಕಲಂ 299 ರಡಿಯಲ್ಲಿ ಸಾಕ್ಷಿಯ ವಿಚಾರಣೆ ಃ

ನಾನು ಲಾರಿ ಚಾಲಕ. ನಾನು 2008 ರಲ್ಲೂ ಸಹ ಲಾರಿ ಚಾಲಕನಾಗಿದ್ದೆ. ನಾನು ಆ ಸಮಯದಲ್ಲಿ ಚಾಲನೆ ಮಾಡುತ್ತಿದ್ದ ಲಾರಿ ನೋಂದಣಿ ಸಂಖ್ಯೆ ಹೇಳಲು ನೆನಪಿಲ್ಲ. ಸುಮಾರು 10-12 ವರ್ಷಗಳ ಹಿಂದೆ ನಾನು ಒಂದು ಲಾರಿಯಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಕಬ್ಬಿಣ ತುಂಬಿಕೊಂಡು ಹೋಗುತ್ತಿದ್ದಾಗ, ನನ್ನೊಂದಿಗೆ ನಮ್ಮ ಲಾರಿ ಕ್ಲೀನರ್ ಆಗಿದ್ದ ಚಾಸಾ-2 ರವರು ಇದ್ದು, ರಾಮನಗರದಿಂದ ಸುಮಾರು 10-12 ಕಿ.ಮೀ ಹಿಂದೆ ಲಾರಿ ನಿಲ್ಲಿಸಿ, ಊಟ ಮುಗಿಸಿ ಹೊರಡುವಾಗ, ಯಾರೋ ಐದಾರು ಜನ ಎಲ್ಲಿಂದಲೋ ಬಂದು ಲಾರಿಯೊಳಗೆ ಪ್ರವೇಶಿಸಿ, ನನ್ನನ್ನು ಹಿಡಿದುಕೊಂಡು ಹೊಡೆದು, ಲಾರಿಯಿಂದ ಕೆಳಗೆ ತಳ್ಳಿ, ನಮ್ಮ ಕ್ಲೀನರನ್ನು ಸಹ ಕೆಳಗೆ ತಳ್ಳಿ, ಲಾರಿಯನ್ನು ಚಾಲನೆ ಮಾಡಿತ್ತಾ ತೆಗೆದುಕೊಂಡು ಹೋದರು. ಸದರಿ ವ್ಯಕ್ತಿಗಳು ಕಬ್ಬಿಣದ ರಾಡಿನಿಂದ ಮತ್ತು ಮಚ್ಚುಗಳಿಂದ ನನ್ನನ್ನು ಹಾಗೂ ನಮ್ಮ ಕ್ಲೀನರ್‌ಗೂ ಸಹ ಹೊಡೆದರು. ಆಗ ರಾತ್ರಿ ಸುಮಾರು 10.00-11.00 ಗಂಟೆ ಆಗಿರಬಹುದು. ಸದರಿ

ವ್ಯಕ್ತಿಗಳನ್ನು ಈಗ ನೋಡಿದರೆ ಅವರ ಪೈಕಿ ಒಬ್ಬರನ್ನು ಅಥವಾ ಇಬ್ಬರನ್ನು ಗುರುತಿಸಬಹುದು. ಅವರ ಕೈಗಳಲ್ಲಿದ್ದ ಕಬ್ಬಿಣದ ರಾಡನ್ನು ಹಾಗೂ ಮಚ್ಚನ್ನು ನೋಡಿದರೆ ಗುರುತಿಸುತ್ತೇನೆ. ಆ ಸಮಯದಲ್ಲಿ ನಮ್ಮ ಲಾರಿಯಲ್ಲಿ ಸುಮಾರು 10 ರಿಂದ 15 ಟನ್ ಕಬ್ಬಿಣದ ಲೋಡನ್ನು ತುಂಬಲಾಗಿತ್ತು. ಈ ಬಗ್ಗೆ ನಾನು ರಾಮನಗರದ ಪೊಲೀಸ್ ಠಾಣೆಯಲ್ಲಿ ದೂರನ್ನು ಸಲ್ಲಿಸಿರುತ್ತೇನೆ. ದೂರನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡತ್ತಿದ್ದು ಗುರುತಿಸುತ್ತೇನೆ. ದೂರನ್ನು ನಿಪಿ-8 ಎಂದು ಹಾಗೂ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನನಗೆ ನನ್ನ ಮೈ ಕೈಗೆ ರಕ್ತಗಾಯಗಳಾಗಿದ್ದ ಕಾರಣ ಠಾಣೆಯಲ್ಲಿ ದೂರು ಸಲ್ಲಿಸಿದ ನಂತರ ಪೊಲೀಸರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆ ನಂತರ ಪೊಲೀಸರು ನನ್ನನ್ನು ಬೇರೆ ಎಲ್ಲಿಯೂ ಕರೆದುಕೊಂಡು ಹೋಗಿರುವುದಿಲ್ಲ. ನಿಪಿ-1 ರಲ್ಲಿ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಸದರಿ ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ದಾಖಲೆಗೆ ನಾನು ಎಲ್ಲಿ ಸಹಿ ಮಾಡಿದ್ದೇನೆ ಎಂದು ನೆನಪಿಲ್ಲ. ನಿಪಿ-1 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 26.06.2008 ರಂದು ನಾನು ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟ ನಂತರ ಅದೇ ದಿನ ಬೆಳಗ್ಗೆ 8.00 ಗಂಟೆಯಿಂದ 9.00 ಗಂಟೆಯ ನಡುವೆ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ, ನಾನು ತೋರಿಸಿದ ಸ್ಥಳದಲ್ಲಿ ನಿಪಿ-1 ರಂತೆ ಮಹಜರ್ ಕ್ರಮ ಜರುಗಿಸಿ, ಅದಕ್ಕೆ

ಈಗ ನಾನು ಗುರುತಿಸಿದ ನನ್ನ ಸಹಿಯನ್ನು ಪಡೆದುಕೊಂಡರು ಎನ್ನುವುದು ನಿಜ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.